ಸೇತುವೆಗಳ ನಿರ್ಮಾಣಕ್ಕೆ ಅನುದಾನ

383(261) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ಪ್ರಸ್ತುತ 2011–12ನೇ ಸಾಲಿನಲ್ಲಿ ಪ್ರತಿ ವಿಧಾನಸಭೆ ಕ್ಷೇತ್ರಾವಾರು ಮಂಜೂರಾದ ಸೇತುವೆಗಳು ಎಷ್ಟು? ಬಿಡುಗಡೆಯಾದ ಅನುದಾನವೆಷ್ಟು?

(ಆ) ಹಾಗಿದ್ದಲ್ಲಿ, ಮಂಜೂರಾದ ಸೇತುವೆಗಳು ಪ್ರತಿ ವಿಧಾನಸಭೆ ಕ್ಷೇತ್ರವಾರು ಗ್ರಾಮಾವಾರು ಒಳಗೊಂಡಂತೆ ಪೂರ್ಣ ಮಾಹಿತಿಯನ್ನು ಒದಗಿಸುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)

(ಅ) ಬೆಳಗಾವಿ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ 2011–12ನೇ ಸಾಲಿನ ಆರ್‌ಐಡಿಎಫ್–17ರ ಯೋಜನೆಯಡಿ ಹುಕ್ಕೇರಿ ತಾಲ್ಲೂಕಿನ/ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹುಕ್ಕೇರಿ–ಸೋಲಾಪುರ–ಖೋಟವಾಡ ರಸ್ತೆಯಲ್ಲಿ ಸೇತುವೆ ನಿರ್ಮಾಣದ ಒಂದು ಕಾಮಗಾರಿಯು 115.00 ಲಕ್ಷ ರೂ ಮೊತ್ತದಲ್ಲಿ ಅನುಮೋದನೆಯಾಗಿರುತ್ತದೆ.

(ಆ) ವಿವರ ಮೇಲಿನಂತಿದೆ.

SCP/ TSP ಯೋಜನೆ

384(262) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಾದ **SCP/ TSP**ಯ (ಒಂದು ಸಾಮೂಹಿಕ ಕೊಳವೆ ಬಾವಿ) ಘಟಕಕ್ಕೆ ಮಂಜೂರು ಮಾಡುವ ಹಣವೆಷ್ಟು;

(ಆ) ಮಂಜೂರಾಗಿರುವ ನೀರಾವರಿ ಯೋಜನೆಗೆ ಕೊಳವೆ ಬಾವಿ ಕೊರೆಯಲು ಪಂಪ್ ಸೆಟ್ ಒದಗಿಸಲು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ವೆಚ್ಚ ಮಾಡುವ ಹಣವೆಷ್ಟು (ಪೂರ್ಣ ಮಾಹಿತಿಯನ್ನು ಒದಗಿಸುವುದು);